# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಹಾಗೂ ಹಾಲಿ ಶಾಸಕರುಗಳ ವಾಸ್ತವ್ಯಕ್ಕಾಗಿ ಒದಗಿಸಲಾಗಿರುವ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾವುಗೊಳಿಸುವ ಬಗ್ಗೆ.

*****

**ಓದಲಾಗಿದೆ:-**

1. ಮಾನ್ಯ ಸಭಾಪತಿಯವರ ಟಿಪ್ಪಣಿ ಸಂಖ್ಯೆ:ಕವಿಪ:ಸಕ:886:2021 ದಿನಾಂಕ:23.08.2021
2. ಕಡತ ಸಂಖ್ಯೆ:ಕವಿಪ:ಶಾಭ:858:ಮಾ.ಸ.ವೇಕೊಬಾ:2021, ಕಂಡಿಕೆ ಸಂಖ್ಯೆ: 1ರಿಂದ 11ರವರೆಗೆ.

**ಪ್ರಸ್ತಾವನೆ:-**

ಓದಲಾಗಿರುವ ಕ್ರಮ ಸಂಖ್ಯೆ:(1) ಮತ್ತು (2) ರಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಶಾಸಕರುಗಳ ವಾಸ್ತವ್ಯಕ್ಕಾಗಿ ಹಾಗೂ ಹಾಲಿ ಶಾಸಕರುಗಳ ಶಿಫಾರಸ್ಸು ಪತ್ರದ ಮೇರೆಗೆ ಬರುವ ಅತಿಥಿಗಳ ವಾಸ್ತವ್ಯಕ್ಕಾಗಿ ಶಾಸಕರ ಭವನದಲ್ಲಿ ಒದಗಿಸಲಾಗುವ ಕೊಠಡಿಗಳ ಬಾಡಿಗೆಯನ್ನು ನಗದು ರೂಪದಲ್ಲಿ ಪಡೆಯಲಾಗುತ್ತಿರುವುದನ್ನು ರದ್ದುಗೊಳಿಸಿ ವಾಸ್ತವ್ಯಕ್ಕಾಗಿ ಪಡೆದ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾವುಗೊಳಿಸಬೇಕೆಂಬ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1:31: ಶಾ ಭ ಕೊ ಬಾ:2021**
**ಬೆಂಗಳೂರು, ದಿನಾಂಕ:28.09.2021.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಮಾಜಿ ಶಾಸಕರುಗಳ ವಾಸ್ತವ್ಯಕ್ಕಾಗಿ ಹಾಗೂ ಹಾಲಿ ಶಾಸಕರುಗಳ ಶಿಫಾರಸ್ಸು ಪತ್ರದ ಮೇರೆಗೆ ಬರುವ ಅತಿಥಿಗಳ ವಾಸ್ತವ್ಯಕ್ಕಾಗಿ ಶಾಸಕರ ಭವನದಲ್ಲಿ ಒದಗಿಸಲಾಗುವ ಕೊಠಡಿಗಳ ಬಾಡಿಗೆಯನ್ನು ನಗದು ರೂಪದಲ್ಲಿ ಪಡೆಯಲಾಗುತ್ತಿರುವುದನ್ನು ರದ್ದುಗೊಳಿಸಿ ವಾಸ್ತವ್ಯಕ್ಕಾಗಿ ಪಡೆದ ಅತಿಥಿ ಕೊಠಡಿಗಳ ಬಾಡಿಗೆ ಹಣವನ್ನು ಮಾನ್ಯ ಮಾಜಿ/ಹಾಲಿ ಶಾಸಕರುಗಳ ಪಿಂಚಣಿ/ವೇತನದಿಂದ ಕಟಾಯಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

**ಮಾನ್ಯ ಸಭಾಪತಿಯವರ ಆದೇಶಾನುಸಾರ,**

**(ಬಿ.ಟಿ. ಶಿವಕುಮಾರ್)**
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.